ಕರ್ನಾಟಕ ವಿಶ್ವವಿದ್ಯಾಲಯದ
ಪಬ್ಲಿಕ್ ಸ್ಕೂಲ್, ಧಾರವಾಡ

ಕ.ಯು./ಯುಪಿಎಸ್/2024-25/ 44

ದಿನಾಂಕ 15.04.2024

## ಪ್ರವೇಶ ಪ್ರಕಟಣೆ

ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಯುನಿವರ್ಸಿಟಿ ಪಬ್ಲಿಕ್ ಶಾಲೆಯ 2024-25 ನೇ ಶೈಕ್ಷಣಿಕ ಸಾಲಿಗೆ 1ನೇ ತರಗತಿಯಿಂದ 10ನೇ ತರಗತಿಯವರೆಗೆ ಶಾಲೆ ಮತ್ತು ವರದಾ ವಸತಿ ನಿಲಯದ ಪ್ರವೇಶಕ್ಕೆ ಅರ್ಜಿಯನ್ನು ಆಹ್ವಾನಿಸಲಾಗಿರುತ್ತದೆ. 6ನೇ ತರಗತಿಯಿಂದ ಕನ್ನಡ ಹಾಗೂ ಆಂಗ್ಲ (ಇಂಗ್ಲೀಷ) ಮಾಧ್ಯಮದಲ್ಲಿ ವ್ಯಾಸಂಗ ಮಾಡಲು ಅವಕಾಶವಿರುತ್ತದೆ ಮತ್ತು 6 ಮತ್ತು 8 ನೇ ತರಗತಿಗಳಿಗೆ ಹೊಸದಾಗಿ ಪ್ರವೇಶ ಬಯಸುವ ವಿದ್ಯಾರ್ಥಿಗಳಿಗೆ ಮಾತ್ರ ವಸತಿ ನಿಲಯದ ಪ್ರವೇಶಕ್ಕೆ ಲಿಖಿತ ಪರೀಕ್ಷೆ ಇರುತ್ತದೆ. (ಇತರ ವರ್ಗಗಳಿಗೆ ಲಿಖಿತ ಪರೀಕ್ಷೆ ಇರುವದಿಲ್ಲ)

## ಪ್ರವೇಶದ ವಿವರ

1) . ಪ್ರವೇಶ ಅರ್ಜಿ ಫಾರ್ಮಗಳನ್ನು ದಿನಾಂಕ: 18.04.2024 ರಿಂದ ವಿತರಿಸಲಾಗುವದು.
2). ಶಾಲಾ ಪ್ರವೇಶಕ್ಕೆ ಅರ್ಜಿ ಶುಲ್ಕ ರೂ. 61/- ಹಾಗೂ ವಸತಿ ನಿಲಯದ ಪ್ರವೇಶಕ್ಕೆ ರೂ.121/- ಗಳನ್ನು ಚಲನ ಮುಖಾಂತರ ತುಂಬಿ ಅರ್ಜಿಯನ್ನು ಶಾಲಾ ಕಚೇರಿಯಿಂದ ಪಡೆಯಬಹುದು.
3) ಭರ್ತಿ ಮಾಡಿದ ಅರ್ಜಿ ಫಾರ್ಮನ್ನು ದಿನಾಂಕ: 29.06.2024 ಮಧ್ಯಾಹ್ನ 4-00 ಘಂಟೆ ಒಳಗೆ ಶಾಲಾ ಕಚೇರಿಗೆ ಸಲ್ಲಿಸುವದು.

**ಪ್ರವೇಶಕ್ಕೆ ಅರ್ಜಿ ಫಾರ್ಮನೊಂದಿಗೆ ಅವಶ್ಯಕವಾಗಿ ಲಗತ್ತಿಸಬೇಕಾದ ದಾಖಲೆಗಳು:**

1) ಹಿಂದಿನ ತರಗತಿಯ ಅಂಕಪಟ್ಟಿ ( ಮಾರ್ಕ್ಸಕಾರ್ಡ)
2) ಜಾತಿ ಹಾಗೂ ಆದಾಯ ಪ್ರಮಾಣಪತ್ರ
3) ವರ್ಗಾವಣೆ ಪ್ರಮಾಣಪತ್ರ. (T.C) ಮೂಲ ಪ್ರತಿ
4) 3 ಇತ್ತೀಚಿನ ಸ್ಟ್ಯಾಂಪ್ ಸೈಜಿನ ಭಾವಚಿತ್ರ
5) ವಾಸಸ್ಥಳದ ದಾಖಲಾತಿ ಪ್ರತಿ (ವಿದ್ಯಾರ್ಥಿ ಆಧಾರ ಕಾರ್ಡ)
6) ವಿದ್ಯಾರ್ಥಿಗಳ ಅಕೌಂಟನ ಪಾಸ್ ಬುಕ್‌ನ ಝರಾಕ್ಸ ಪ್ರತಿ
7) ವಿದ್ಯಾರ್ಥಿ ತಂದೆ ತಾಯಿ ಆಧಾರಕಾರ್ಡ ಝರಾಕ್ಸ ಪ್ರತಿ
8) ರೇಶನ್ ಕಾರ್ಡ ಪ್ರತಿ.

**ವಿಶೇಷ ಸೂಚನೆ:**

1) 6ನೇ ಮತ್ತು 8ನೇ ವರ್ಗಕ್ಕೆ ವಸತಿ ನಿಲಯಕ್ಕೆ ಪ್ರವೇಶ ಬಯಸಿ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳಿಗೆ ಲಿಖಿತ ಪರೀಕ್ಷೆಯನ್ನು ನಡೆಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಸ್ಥಳಾವಕಾಶದ ಲಭ್ಯತೆಯ ಅನುಗುಣವಾಗಿ (ಶೇಕಡಾವಾರು ಆಧಾರದ ಮೇಲೆ ) ಪ್ರವೇಶ ನೀಡಲಾಗುವದು.
2) ಲಿಖಿತ ಪರೀಕ್ಷೆಯನ್ನು ಜರುಗಿಸುವ ದಿನಾಂಕ ಮತ್ತು ಸಮಯವನ್ನು ನಂತರದಲ್ಲಿ ತಿಳಿಸಲಾಗುವುದು.
3) ಪ್ರವೇಶ ಬಗ್ಗೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಶಾಲೆಯ ಕಚೇರಿಯ ದೂರವಾಣಿ **ಸಂಖ್ಯೆ : 0836-2442373** ಗೆ ಕರೆ ಮಾಡಿ ವಿಚಾರಿಸಬಹುದು. ಮುಂದುವರೆದು ಮೇಲ್ಕಾಣಿಸಿದ ವಿಷಯದಲ್ಲಿ ಯಾವುದೇ ಬದಲಾವಣೆಯನ್ನು ಜಾರಿಗೆ ತರುವ ಹಕ್ಕನ್ನು ವಿಶ್ವವಿದ್ಯಾಲಯವು ಹೊಂದಿರುತ್ತದೆ.

ಪ್ರಾಚಾರ್ಯರು
ಕವಿವಿ ಪಬ್ಲಿಕ್ ಸ್ಕೂಲ್
ಧಾರವಾಡ

ಕುಲಸಚಿವರು
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ